98900

ಚುಕ್ಕೆ ಗುರುತಿನ ದಿನಾಂಕ: 28.03.2022

104

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಗೋವಿಂದರಾಜು, ಶ್ರೀ ಎಸ್.ಎಲ್.ಭೋಜೇಗೌಡ ಹಾಗೂ ಶ್ರೀ ಸೂರಜ್ ರೇವಣ್ಣ ಇವರು ನಿಯಮ 330 ರಡಿ ನೀಡಿರುವ ಸೂಚನೆಗೆ ಸರ್ಕಾರದ ಹೇಳಿಕೆ

| | |
|---|---|
| ಸೂಚನೆ: | ಭಾರತ ಸಂವಿಧಾನ- ಅಧ್ಯಾಯ-II ರಡಿಯಲ್ಲಿರುವ ಲೋಕಸೇವಾ ಆಯೋಗಗಳು ಎನ್ನುವ ಶಿರ್ಷಿಕೆ ಅಡಿಯಲ್ಲಿ ಮತ್ತು ಅನುಚ್ಛೇದ 315- ರ ಕೆಳಗೆ ಒಕ್ಕೂಟಕ್ಕೆ ಮತ್ತು ರಾಜ್ಯ ಗಳಿಗೆ ಲೋಕಸೇವಾ ಆಯೋಗಗಳು ಎನ್ನುವುದರಡಿ ಕರ್ನಾಟಕ ಲೋಕಸೇವಾ ಆಯೋಗ ರಚಿತವಾಗಿದೆ. ಅನುಚ್ಛೇದ-320 ರಲ್ಲಿ ಲೋಕಸೇವಾ ಆಯೋಗಗಳ ಪ್ರಕಾರ್ಯಗಳು ವ್ಯಾಖ್ಯಾನವಿದ್ದು, ಸಿವಿಲ್ ಸೇವೆಗಳಿಗೆ ಮತ್ತು ಸಿವಿಲ್ ಹುದ್ದೆಗಳಿಗೆ ನೇಮಕಾತಿ ಮಡುವ ವಿಧಾನ, ಬಡ್ತಿಗಳನ್ನು ನೀಡುವ ವಿಧಾನ ಹಾಗೂ ಶಿಸ್ತುಪಾಲನಾ ವಿಷಯಗಳ ಬಗ್ಗೆ ರಾಜ್ಯಗಳು ಲೋಕಸೇವಾ ಆಯೋಗದೊಂದಿಗೆ ಸಮಾಲೋಚಿಸತಕ್ಕದ್ದು ಎಂದು ಉಲ್ಲೇಖವಿದೆ.<br><br>ಆದರೆ, ಕರ್ನಾಟಕ ಸರ್ಕಾರವು, ನಾಗರಿಕ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14) 8ನೇ ಪ್ರಕಾರ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ಕ್ಕೆ ಕರ್ನಾಟಕ ಲೋಕಸೇವಾ ಆಯೋಗದೊಂದಿಗೆ ಸಮಾಲೋಚಿಸದೇ ತಿದ್ದುಪಡಿ ತರಲು ಕರಡು ಅಧಿಸೂಚನೆಯನ್ನು ದಿನಾಂಕ: 21.01.2022 ರಂದು ಹೊರಡಿಸಿದೆ. ಈ ಕರಡು ತಿದ್ದುಪಡಿಯಲ್ಲಿ ನಾಗರಿಕ ಸೇವೆಯಲಿರುವ 'ಬಿ' ಗ್ರೂಪ್ ನಲ್ಲಿರುವ ಹುದ್ದೆಗಳನ್ನು ಕೈಬಿಟ್ಟು, ಇ ಹುದ್ದೆಗಳನ್ನು 'ಸಿ' ಗ್ರೂಪ್ ಹುದ್ದೆಗಳಲ್ಲಿ ವಿಲೀನಗೊಳಿಸಲು ಉದ್ದೇಶಿಸಲಾಗಿದೆ. ಮುಂದುವರೆದು, ಕರ್ನಾಟಕ ಗೆಜೆಟೆಡ್ ಪ್ರೊಬೆಸನ ರ್ (ಸ್ಪರ್ಧಾತ್ಮಕ ನೇಮಕಾತಿ)- ನಿಯಮಗಳು, 1997 ಕ್ಕೆ ತಿದ್ದುಪಡಿ ತರಲು ಸಹ ಕರಡು ಅಧಿಸೂಚನೆಯನ್ನು ದಿನಾಂಕ: 21.02.2022 ರಂದು ಹೊರಡಿಸಲಾಗಿದೆ. ಈ ಪ್ರಸ್ತಾಪಿತ ತಿದ್ದುಪಡಿಯಲ್ಲಿ ವ್ಯೆಯಕ್ತಿಕ ಸಂದರ್ಶನಕ್ಕೆ ಈ ಹಿಂದೆ ಇದ್ದ '50' ಅಂಕಗಳನ್ನು '25' ಅಂಕಗಳಿಗೆ ಇಳಿಸಲಾಗಿದೆ. ಈ ಮೇಲ್ಕಂಡ ಪ್ರಸ್ತಾಪಿತ ತಿದ್ದುಪಡಿಗಳಿಂದ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಬಯಸುವ ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆ ಮತ್ತು ಸಿವಿಲ್ ಸೇವೆಯಲ್ಲಿರುವ ಅಧಿಕಾರಿಗಳ ಸೇವೆಯನ್ನು ಕಡೆಗಣಿಸಲು ಹುನ್ನಾರ ನೆಡೆದಿದೆ ಇಂತಹ ತಿದ್ದುಪಡಿಗಳು ನಿಯಂತ್ರಣ ತಪ್ಪಿದ ತಿದ್ದುಪಡಿಯಾಗಿರುವುದಲ್ಲದೆ, ಸಂವಿಧಾನದಡಿ ರೂಪಿತವಾಗಿರುವ ಕರ್ನಾಟಕ ಲೋಕಸೇವಾ ಆಯೋಗವನ್ನು ಕಡೆಗಣಿಸಿದಂತೆ ಆಗಿದೆ. ಆದ್ದರಿಂದ, ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇವೆ. |
| ಉತ್ತರ: | ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ನಿಯಮಗಳು ಯಾವುದೇ ವಿಶೇಷ/ಸಾಮಾನ್ಯ ನಿಯಮಗಳ ಮೂಲಕ ನೇರ ನೇಮಕಾತಿಯ ವಿಧಾನವನ್ನು ಗೊತ್ತುಪಡಿಸಿಲ್ಲದ, ನೇರ ನೇಮಕಾತಿ ಮೂಲಕ ಭರ್ತಿ ಮಾಡಬಹುದಾದ ಗ್ರೂಪ್-ಎ, ಬಿ, ಸಿ ಮತ್ತು ಡಿ ಹುದ್ದೆಗಳಿಗೆ ಅನ್ವಯವಾಗುತ್ತದೆ. ಸದರಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕರಡು ಅಧಿಸೂಚನೆಯನ್ನು ದಿನಾಂಕ: 21.02.2022 ರಂದು ಹೊರಡಿಸಲಾಗಿದೆ. ಸದರಿ ಕರಡು ನಿಯಮಗಳಲ್ಲಿ ನಾಗರಿಕ |



Generated from eOffice by G JAGADEESHA, CMO-JS(GJ), JOINT SECREATRY, CMO on 17/03/2022 05:51 PM

ಸೇವೆಯಲ್ಲಿರುವ ಗ್ರೂಪ್-ಬಿ ಹುದ್ದೆಗಳನ್ನು ಗ್ರೂಪ್-ಸಿ ಹುದ್ದೆಗಳಲ್ಲಿ ವಿಲೀನಗೊಳಿಸುವ ಯಾವುದೇ ಅಂಶ ಇರುವುದಿಲ್ಲ. ಇದರಲ್ಲಿ, ಗ್ರೂಪ್-ಸಿ ಹುದ್ದೆಗಳಿಗೆ ಸಂದರ್ಶನದಿಂದ ನೀಡಲಾಗಿದ್ದ ವಿನಾಯಿತಿಯನ್ನು ಗ್ರೂಪ್-ಬಿ ಹುದ್ದೆಗಳಿಗೂ ವಿಸ್ತರಿಸಲಾಗಿದೆ. ಇದರಿಂದಾಗಿ, ಗ್ರೂಪ್-ಬಿ ಹುದ್ದೆಗಳಿಗಿರುವ ಕರ್ತವ್ಯಗಳು, ಅಧಿಕಾರ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ಬದಲಾವಣೆ ಉಂಟಾಗುವುದಿಲ್ಲ. ಗ್ರೂಪ್-ಬಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರುವ ಹಾಗೂ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಉದ್ದೇಶದಿಂದ ಸದರಿ ಹುದ್ದೆಗಳಿಗೆ ಸಂದರ್ಶನವನ್ನು ಕೈಬಿಡಲು ಪ್ರಸ್ತಾಪಿಸಲಾಗಿದೆ. ಗ್ರೂಪ್-ಎ ಹುದ್ದೆಗಳಿಗೆ ಸಂಬಂಧಿಸಿದಂತೆ, ಅಗತ್ಯತೆಗನುಗುಣವಾಗಿ ಸ್ಪರ್ಧಾತ್ಮಕ ಪರೀಕ್ಷೆಯ ಅಂಕಗಳನ್ನು ಹೆಚ್ಚಿಸಿರುವುದರಿಂದ, ಸಂದರ್ಶನದ ಅಂಕಗಳನ್ನು ಕಡಿತಗೊಳಿಸಲಾಗಿದೆ. ಇದರಿಂದ, ಗ್ರಾಮೀಣ ಅಥವಾ ಇನ್ನಿತರ ವರ್ಗದ ಅಭ್ಯರ್ಥಿಗಳ ನಡುವೆ ಯಾವುದೇ ತಾರತಮ್ಯ ಮಾಡಿದಂತಾಗುವುದಿಲ್ಲ ಹಾಗೂ ಯಾವುದೇ ರೀತಿಯ ಅನ್ಯಾಯ ಉಂಟಾಗುವುದಿಲ್ಲ.

ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳ ನೇಮಕಾತಿಯು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಮಾಡುವ ನೇಮಕಾತಿಯಾಗಿದ್ದು ಅಭ್ಯರ್ಥಿಗಳನ್ನು ಹುದ್ದೆಗಳಿಗೆ ಆಯ್ಕೆ ಮಾಡುವಲ್ಲಿ ಮುಕ್ತ ನಿಷ್ಪಕ್ಷಪಾತವಾದ ಮತ್ತು ಮೆರಿಟ್ ಆಧಾರಿತ ಆಯ್ಕೆಯನ್ನು ಮಾಡಲು ವ್ಯಕ್ತಿತ್ವ ಪರೀಕ್ಷೆಯ ಅಂಕವನ್ನು ಸೂಕ್ತ ಪ್ರಮಾಣದಲ್ಲಿ ಕಡಿಮೆ ಮಾಡುವುದು ಸಮರ್ಥನೀಯವಾಗಿದೆ. ವ್ಯಕ್ತಿತ್ವ ಪರೀಕ್ಷೆಗೆ ಹಾಜರಾಗುವ ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೆ ಇದು ಸಮಾನವಾಗಿ ಅನ್ವಯವಾಗುತ್ತದೆ. ಇದರಿಂದಾಗಿ, ಪ್ರತಿಭಾವಂತ ಹಾಗೂ ಅರ್ಹತೆಯುಳ್ಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಮಾನ ಅವಕಾಶ ದೊರೆಯುತ್ತದೆ. ಅಲ್ಲದೇ, ವ್ಯಕ್ತಿತ್ವ ಪರೀಕ್ಷೆ ಅಂಕಗಳನ್ನು 50 ಅಂಕಗಳಿಂದ 25 ಅಂಕಗಳಿಗೆ ಕಡಿಮೆ ಮಾಡುವುದರಿಂದ ಅರ್ಹ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಅಡಚಣೆಗಳು ಉಂಟಾಗುವುದಿಲ್ಲ. ಹಾಗೂ ಆಯ್ಕೆಯಲ್ಲಿಯೂ ನ್ಯಾಯಯುತ ಸಮತೋಲನೆ ತರುವ ಉದ್ದೇಶಕ್ಕಾಗಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು, 1997 ಕ್ಕೆ ತಿದ್ದುಪಡಿ ಮಾಡಲು ಕರಡು ಅಧಿಸೂಚನೆಯನ್ನು ದಿನಾಂಕ: 21.02.2022 ರಂದು ಹೊರಡಿಸಲಾಗಿದೆ. ಇದನ್ನು ದಿನಾಂಕ: 24.02.2022 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ.

ಮೇಲ್ಕಂಡ ಕರಡು ನಿಯಮಗಳಿಗೆ ಸ್ವೀಕೃತವಾಗಿರುವ ಆಕ್ಷೇಪಣೆ/ಸಲಹೆಗಳನ್ನು ಪರಿಶೀಲಿಸಿ ಸರ್ಕಾರವು ನಿಯಮಗಳನ್ನು ಅಂತಿಮಗೊಳಿಸುವ ಬಗ್ಗೆ ಕ್ರಮವಹಿಸುತ್ತದೆ.

ಸಂಖ್ಯೆ: ಸಿಆಸುಇ 45 ಸೇವನೆ 2022

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ.